ದಿಃ 22.10.2024ರ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 29.10.2024.

**ಮುಂದುವರೆದ ಮುಖ್ಯ ವಿಚಾರಣೆಃ** 8 ಮತ್ತು 9ನೇ ಪ್ರತಿವಾದಿಗಳ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದಃ

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಎಸ್.ಇ.ನಂ.24/2009ರಲ್ಲಿಯ ಮಾನ್ಯ ಜಿಲ್ಲಾ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನಿಡಿ-106 ಎಂದು, ಪ್ರ.ವರದಿಯ ಪ್ರತಿಯನ್ನು ನಿಡಿ-107 ಎಂದು, ಹೇಳಿಕೆಯನ್ನು ನಿಡಿ-108 ಎಂದು, ದೋಷಾರೋಪಣಾ ಪತ್ರವನ್ನು ನಿಡಿ-109 ಎಂದು, ದೃಢಿಕೃತ ನಕಲಿನ ವರ್ಗಾವಣೆ ಪತ್ರವನ್ನು ನಿಡಿ-110 ಎಂದು, ಅನ್ಸರ್ ಅಲಿ ರವರ ಆಧಾರ ಕಾರ್ಡ್‌ನ್ನು ನಿಡಿ-111 ಎಂದು, ಮೂಲ ಕ್ರಯ ಪತ್ರವನ್ನು ನಿಡಿ-112 ಎಂದು, ಕೆ.ಇ.ಬಿ. ರವರು ಬಾವಿ ಪಮಶೆಟ್ ಕೂಡಿಸುವ ಸಲುವಾಗಿ ನೀಡಿದ ಎಲ್ಲ ದಾಖಲೆಗಳನ್ನು ಒಟ್ಟಾಗಿ ನಿಡಿ-113 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ</u>** <u>ವಾದಿ ಪರ ವಕೀಲರಿಂದಃ</u>

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**